ಇದೇ ರೀತಿಯಾಗಿ ಹುಣಸಿಹಾಳಹುಡಾ ಪುನರ್ ವಸತಿ ಗ್ರಾಮದಲ್ಲಿ ಕಪ್ಪು ಮಣ್ಣಿನಲ್ಲಿ 337 ಮನೆಗಳನ್ನು ನಿರ್ಮಿಸುತ್ತಿದ್ದು, ಈ ಪೈಕಿ ಕೇವಲ 5-6 ಮನೆಗಳಲ್ಲಿ ಬಿರುಕು ಬಂದಿರುವುದರಿಂದ, ಜಂಟಿ ನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ, ರಾಯಚೂರು ರವರು ಸಂಬಂಧಿಸಿದ ಅಭಿಯಂತರರನ್ನು ಅಮಾನತ್‌ಗೊಳಿಸಿರುತ್ತಾರೆ. ಅಲ್ಲದೇ ಈ ಮನೆಗಳನ್ನು ಕಪ್ಪು ಭೂಮಿಯಲ್ಲಿ ನಿರ್ಮಾಣ ಮಾಡಿರುವುದರಿಂದ ಈ ಕುರಿತು ಹೆಚ್ಚಿನ ತಂತ್ರಜ್ಞಾನದ ಅಭಿಪ್ರಾಯಕ್ಕಾಗಿ ಟಿ.ಆರ್.ಎಫ್ (Tor Steel Research Foundation in India, Bangalore) ರವರನ್ನು ಕೋರಲಾಗಿದೆ.

ಭೂ ಸುಧಾರಣಾ ಕಾಯಿದೆ ತಿದ್ದುಪಡಿ

928(933) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೃಷಿಯೇತರರು ಕೃಷಿ ಭೂಮಿಯನ್ನು ಖರೀದಿಸಲು ಇರುವ ಕಾನೂನಿನ ನಿರ್ಬಂಧ ಗೃಹ ಉದ್ಯಮದ ಪ್ರಗತಿಗೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಕರ್ನಾಟಕ ಭೂ ಸುಧಾರಣಾ; ಕಾಯಿದೆ ತಿದ್ದುಪಡಿ ಮಾಡಲು ಸರ್ಕಾರ ಉದ್ದೇಶಿಸಲಾಗಿದೆಯೇ: ಇದಕ್ಕೆ ಗರಿಷ್ಟ ಕಾಲ ಮಿತಿಯನ್ನು ಏನಾದರೂ ನಿಗದಿಪಡಿಸಿಕೊಂಡಿದೆಯೇ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) ಇಲ್ಲ.

2) ಉದ್ಭವಿಸುವುದಿಲ್ಲ.

ಬೆಂಗಳೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಯಾತ್ರಿ ನಿವಾಸ್ ವಸತಿ ಗೃಹಗಳು

929 (934) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಯಾತ್ರಿ ನಿವಾಸ್ ವಸತಿಗೃಹವನ್ನು ಬಾಡಿಗೆ ನೀಡಲಾಗಿದೆಯೆ;

ಆ) ಯಾರಿಗೆ ಗುತ್ತಿಗೆ ನೀಡಲಾಗಿದೆ;

ಇ) ಗುತ್ತಿಗೆ ಅವಧಿ ಎಷ್ಟು;

ಈ) ನಿಗಧಿತ ಮಾಹೆಯಾನ : ವಾರ್ಷಿಕ ಹಣ ಎಷ್ಟು;

ಉ) ಈ ಒಪ್ಪಂದ ಮಾಡಿಕೊಳ್ಳುವ ಮುನ್ನ ಸಾರ್ವಜನಿಕ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿದ್ದೀರಾ?

ಊ) ಭಾಗವಹಿಸಿದವರ ವಿವರ ನೀಡುವುದು.